**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.72/2020**

**(ಚಾ.ಸಾ.6/ಪ್ರಾ.ಸಾ.4)**

ತಾಃ 10.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ವಿಜಯದೇವ |
| ತಂದೆಯ ಹೆಸರು | ರಾಮಚಂದ್ರಯ್ಯ ಹಚ್ |
| ವಯಸ್ಸು | 56 ವರ್ಷ |
| ಉದ್ಯೋಗ | ಶಿಕ್ಷಕ ವೃತ್ತಿ |
| ವಾಸ ಸ್ಥಳ | ನೆಲಮಂಗಲ |

**<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ಚಾಸಾ.1, 4 ಮತ್ತು 7 ರವರ ಪರಿಚಯ ಇರುತ್ತದೆ. ಸುಮಾರು 4 ವರ್ಷದ ಹಿಂದೆ ಅಂದರೆ 2019 ನೇ ಇಸವಿ ಆಗಸ್ಟ್ ತಿಂಗಳಿನಲ್ಲಿ ನೆಲಮಂಗಲ ಪೊಲೀಸರು ಮಹಜರ್ ಸ್ಥಳದಲ್ಲಿ ಹಾಜರಿದ್ದು ಮಹಜರ್ ಕ್ರಮಗಳಿಗೆ ಸಹಕರಿಸುವಂತೆ ನನಗೆ ಹಾಗೂ ಚಾಸಾ.7 ರವರಿಗೆ ಪೊಲೀಸ್ ಠಾಣೆಗೆ ಕರೆಯಿಸಿ ಕೋರಿರುತ್ತಾರೆ. ಪೊಲೀಸರು ನಮ್ಮನ್ನು ಸೀಗೆಹಳ್ಳಿ ಗೇಟ್ ಬಳಿ ಇರುವ ಮಾಚೋಹಳ್ಳಿ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಚಾಸಾ.1, 4

ಹಾಗೂ ಇತರೆ ಪೊಲೀಸ್ ಅಧಿಕಾರಿಗಳು ಹಾಜರಿದ್ದರು. ಸದರಿ ಸ್ಥಳದಲ್ಲಿ ಗುಂಡುಗಳು, ರಕ್ತದ ಕಲೆ, ಒಂದು ಲಾಂಗ್, ಒಂದು ಡ್ರ್ಯಾಗರ್ ಬಿದ್ದಿತ್ತು. ಸ್ಥಳದಲ್ಲಿ ಗುಂಡು ಹಾರಿಸಿ ಬಿದ್ದಿದ್ದ ವಸ್ತುಗಳು ಇದ್ದವು. ಸ್ಥಳವನ್ನು ಚಾಸಾ.1 ಹಾಗೂ ಚಾಸಾ.4 ರವರು ತೋರಿಸಿರುತ್ತಾರೆ. ಸ್ಥಳದ ಫೋಟೋಗಳನ್ನು ತೆಗೆದು ಮಹಜರ್ ಕ್ರಮ ಜರುಗಿಸಿರುತ್ತಾರೆ. ಸ್ಥಳದಲ್ಲಿ ಸಿಕ್ಕ ವಸ್ತುಗಳನ್ನು ಖಾಕಿ ಕವರ್ ಗಳಿಗೆ ಹಾಕಿ ಸೀಲ್ ಮಾಡಿ ನಮ್ಮಗಳ ಸಹಿಗಳನ್ನು ಪಡೆದಿದ್ದು ಇದರ ಜೊತೆ ಪೊಲೀಸರು ಗುಂಡು ಹಾರಿಸಲು ಉಪಯೋಗಿಸಿದ ರೈಫಲ್ ಗಳನ್ನು ಪಡೆದು ಖಾಕಿ ಕವರ್ ಗಳಿಗೆ ಹಾಕಿ ಸೀಲ್ ಮಾಡಿ ನಮ್ಮಗಳ ಸಹಿಗಳನ್ನು ಪಡೆದಿರುತ್ತಾರೆ.

2. ಸದರಿ ವಸ್ತುಗಳನ್ನು ತೆಗೆದುಕೊಂಡಾಗ ಸಂಜೆ 5.00 ಗಂಟೆ ಮೇಲೆ ಸಮಯ ಆಗಿತ್ತು. ಸಾಕ್ಷಿದಾರರು ನಿ.ಪಿ.2 ಮಹಜರ್ ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿದಾರರ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸ್ಥಳದಲ್ಲಿ ತೆಗೆದ ನಿ.ಪಿ.3 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸ್ಥಳದಲ್ಲಿ ಒಂದು ಇನೋವಾ ಕಾರ್ ಸಹ ಇತ್ತು. ಸ್ಥಳದಲ್ಲಿ ವಶಪಡಿಸಿಕೊಂಡ ವಸ್ತುಗಳನ್ನು ನಾನು ನೋಡಿದಲ್ಲಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 8 ಎಂದು ಗುರುತಿಸಿರುತ್ತದೆ. ನಿ.ಪಿ.3 ಫೋಟೋಗಳಲ್ಲಿ ನಾನು ಸಹ ಇರುತ್ತೇನೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ**

3. ಆರೋಪಿ ಪರ ವಕೀಲರನ್ನು ಕೂಗಿಸಿದ್ದು ಗೈರು ಹಾಜರಿದ್ದು ಆರೋಪಿ ತನ್ನ ಪರ ವಕೀಲರು ಮುಂದಿನ ತಾರೀಖಿನಂದು ಬರುವುದಾಗಿ ತಿಳಿಸಿದ್ದು ಯಾವುದೇ ಸಕಾರಣಗಳು ಇಲ್ಲವಾಗಿ ಆರೋಪಿಯ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.